# ಹೊಸ ವರ್ಷದ ಹಾರ್ದಿಕ ಅಭಿನಂದನೆಗಳು – ೨೦೨೧

ಆತ್ಮೀಯ ಬಂಧುಗಳೇ,

ಸಮಸ್ತ ಪ್ರಪಂಚವೂ ಕೋವಿಡ್–೧೯ ವೈರಾಣುವಿನ ಕಬಂಧ ಬಾಹುವಿನಿಂದ ಕಳಚಿಕೊಳ್ಳಲು ಹರಸಾಹಸ ಮಾಡುತ್ತಿದೆ. ಈ ಸಂದಿಗ್ಧ ಪರಿಸ್ಥಿತಿಯ ನಡುವೆಯೇ ಕಾಲಚಕ್ರ ಉರುಳಿ, ಬಹುತೇಕ ಒಂದು ವರ್ಷಾವಧಿಯನ್ನು ಪೂರೈಸುವ ಹಂತದಲ್ಲಿದೆ. ಪ್ರಪಂಚದ ಎಲ್ಲೆಡೆ ಉಂಟಾಗಿರುವ ತಲ್ಲಣ, ಭಯ, ಸಾವುನೋವುಗಳು ನಮ್ಮೆಲ್ಲರ ದೈನಂದಿನ ಜೀವನದ ಮೇಲೆ ಅಗಾಧ ಪರಿಣಾಮವನ್ನು ಬೀರಿದೆ. ಇಂತಹ ಸನ್ನಿವೇಶದಲ್ಲೂ 'ವಿವೇಕಪ್ರಭ' ಸಹಜವಾಗಿಯೇ ಕಾರ್ಯವೆಸಗುತ್ತ ಬಂದಿದೆ. ಲಾಕ್‌ಡೌನ್ ಹಾಗೂ ನಿರ್ಬಂಧಿತ ಸನ್ನಿವೇಶಗಳಲ್ಲಿ ಓದಿನ ಸದುಪಯೋಗ ಮಾಡಿಕೊಂಡವರ ಸಂಖ್ಯೆ ಅನೇಕ. ಈ ನಿಟ್ಟಿನಲ್ಲಿ ನಮ್ಮ ಪತ್ರಿಕಾಬಳಗ ಎಲ್ಲ ತೊಂದರೆಗಳನ್ನೂ ಎದುರಿಸಿ, ನಮ್ಮ ಧ್ಯೇಯ–ಆದರ್ಶಗಳನ್ನು ಓದುಗರಿಗೆ ತಲುಪಿಸುವ ಕಾರ್ಯದಲ್ಲಿ ಅವಿರತವೂ ಶ್ರಮಿಸುತ್ತಿದೆ.

ಆಧುನಿಕತೆಯ ಪ್ರಭಾವ ಇತ್ತೀಚಿನ ದಿನಗಳಲ್ಲಿ ಜೀವನದ ಎಲ್ಲ ಸ್ತರಗಳಲ್ಲೂ ಅಧಿಕವಾಗುತ್ತಿದೆ. ಆಧುನಿಕತೆಯೆಂದರೆ ಹೊಸ ಬಗೆಯ ಫ್ಯಾಷನ್, ಸ್ವಚ್ಛಂದ ರೀತಿನೀತಿ–ಹವ್ಯಾಸಗಳು, ಅತಿಯಾದ ಎಲೆಕ್ಟ್ರಾನಿಕ್ ವಸ್ತುಗಳ ಬಳಕೆಯೆಂದೇ ಅನೇಕರು ಭಾವಿಸಿದ್ದಾರೆ. ಆತ್ಮಹತ್ಯಾಕಾರಕವಾದ ಈ ಧೋರಣೆಯಿಂದ ನಾವು 'ಜೀವಂತ ಶವ'ವಾಗುವೆವು; ಮೇಲ್ನೋಟದ ಆಧುನಿಕತೆಯ ಆವಾಹನೆಯಿಂದ ನಮ್ಮತನವನ್ನೇ ಕಳೆದುಕೊಳ್ಳುವೆವು. ಅದೆಂಥ ಅನರ್ಘ್ಯ ರತ್ನವನ್ನು ನಾವು ಕಳೆದುಕೊಳ್ಳುತ್ತೇವೆ ಎಂಬುದನ್ನು ನಾವೆಲ್ಲರೂ ಚಿಂತಿಸಬೇಕು. ಆಧ್ಯಾತ್ಮಿಕ, ಧಾರ್ಮಿಕ ಹಾಗೂ ನೈತಿಕ ಆದರ್ಶ–ಮೌಲ್ಯಗಳೇ ನಮ್ಮ ಸಂಸ್ಕೃತಿಯ ಬುನಾದಿ. ಇವನ್ನು ಮರೆತ ಜೀವನ ಅನ್ಯ ಸಂಸ್ಕೃತಿಯ ದಾಸ್ಯವನ್ನೂ ಅಳವಡಿಸಿಕೊಳ್ಳದ, ನಮ್ಮ ಸಂಸ್ಕೃತಿಯನ್ನೂ ಕಳೆದುಕೊಂಡ ತ್ರಿಶಂಕು ಸ್ಥಿತಿಯಲ್ಲಿ ಡೋಲಾಯಮಾನವಾಗುವುದು ನಿಶ್ಚಿತ. ನಿಜವಾದ ಅರ್ಥದಲ್ಲಿ ನಾವು 'ಆಧುನಿಕ'ರಾಗೋಣ. ನಮ್ಮ ಸಾಂಸ್ಕೃತಿಕ ಗಟ್ಟಿತನದಲ್ಲಿ ನೆಲೆನಿಂತು ಹೊಸ ಹೊಸ ಭಾವ, ವಿಚಾರ ಹಾಗೂ ರೀತಿನೀತಿಗಳನ್ನು ಸ್ವೀಕರಿಸೋಣ. ಇದರಿಂದ ನಾವು ಇನ್ನಷ್ಟು ಬಲಿಷ್ಠರಾಗುತ್ತೇವೆ. ನಮ್ಮತನದಿಂದ ನಾವು ಸಾರ್ಥಕ ಜೀವನ ನಡೆಸುತ್ತೇವೆ. ಈ ದಿಕ್ಕಿನಲ್ಲಿ ಈ ವರ್ಷದ ವಿಶೇಷ ಸಂಚಿಕೆಗೆ 'ಭಾರತೀಯ ಸಂಸ್ಕೃತಿ' ಎಂಬ ವಿಷಯವನ್ನು ಆರಿಸಿಕೊಂಡಿದ್ದೇವೆ. ಅನೇಕ ಮಂದಿ ನುರಿತ ಲೇಖಕರು, ಚಿಂತಕರು ಇಲ್ಲಿ ಹಲವು ಪರಿಣಾಮಕಾರಿಯಾದ ಲೇಖನಗಳನ್ನು ಬರೆದಿದ್ದಾರೆ.

'ವಿವೇಕಪ್ರಭ'ದ ಪ್ರತಿಯೊಂದು ಸಂಚಿಕೆಯೂ ಮನೆಮನೆಗೆ ನಮ್ಮ ಸಂಸ್ಕೃತಿಯ ಪಾಠವನ್ನು ತಲುಪಿಸುವ ಸಾಧನವಾಗಿದೆ. ನಮ್ಮ ಸಂಸ್ಕೃತಿಯ ಹಿರಿಮೆ, ಗರಿಮೆ ಇವುಗಳನ್ನು ನಾವು ವೈಚಾರಿಕವಾಗಿ ಅರಿತಿದ್ದರೆ ಸಾಲದು, ಅದನ್ನು ಪ್ರಾಯೋಗಿಕವಾಗಿ ಆಚರಿಸಬೇಕು; ಮುಂದಿನ ಜನಾಂಗಕ್ಕೆ ಅದನ್ನು ದಾಟಿಸಬೇಕು. ಹಾಗೆ ದಾಟಿಸಲು ಅಗತ್ಯವಾದ ಹೊಸ ಹೊಸ ಸಾಧನಗಳನ್ನು ನಾವು ಕಂಡುಕೊಳ್ಳಬೇಕು. ಗ್ರಾಮಾಂತರ ಪ್ರದೇಶದ ಕೊನೆಯ ವ್ಯಕ್ತಿಯವರೆಗೂ ಇದನ್ನು ತಲುಪಿಸಲು ಈ ಸಾಧನವನ್ನು ಸುಲಭೀಕರಿಸಿ, ಸರಳೀಕರಿಸಿ ಯತ್ನಿಸಬೇಕು. ನಮ್ಮ ಇಂದಿನ ಶಿಕ್ಷಣ ಮತ್ತು ಆಧುನಿಕತೆ ಇವು ಸಂಸ್ಕೃತಿಯ ಕಲಿಕೆಯನ್ನು ನೀಡಲಾರದ ಸ್ಥಿತಿಯಲ್ಲಿವೆ. ಆದ್ದರಿಂದ ಇದಕ್ಕೆ ಪೂರಕವಾಗಿ ಮನೆಮನೆಗಳಲ್ಲಿ ಮಕ್ಕಳಿಗೆ ತಂದೆತಾಯಿಗಳು ಸಂಸ್ಕೃತಿ ಶಿಕ್ಷಣದ ಪಾಠವನ್ನು ಕೊಡಿಸಬೇಕು. 'ವಿವೇಕಪ್ರಭ'ದಂತಹ ಮಾಸಪತ್ರಿಕೆಗಳಿಂದ ಇಂತಹ ಸಂಸ್ಕೃತಿಯ ಪ್ರಸಾರ ಸಾಧ್ಯವಾಗುವುದು. ಇತ್ತೀಚೆಗೆ, ಮೈಸೂರಿನಲ್ಲಿ ಕೋವಿಡ್–೧೯ ಹಾವಳಿಯ ನಡುವೆಯೇ 'ಹಚ್ಚ ಹಸುರು ಮೈಸೂರು, ವಿವೇಕ ಪ್ರಭೆಯ ಮೈಸೂರು' ಎಂಬ ಅಭಿಯಾನವನ್ನು ನಾವು ಕೈಗೊಂಡಿದ್ದು, ಅದರಲ್ಲಿ ಉಚಿತವಾಗಿ 'ವಿವೇಕಪ್ರಭ' ಪತ್ರಿಕೆಯನ್ನು ಜನಸಾಮಾನ್ಯರಿಗೆ ವಿತರಿಸಲಾಯಿತು. ಕನ್ನಡಿಗರು ಸ್ವ–ಇಚ್ಛೆಯಿಂದ ಚಂದಾದಾರರಾಗುವ ಮೂಲಕ ನಮ್ಮ ಸಂಸ್ಕೃತಿ ಪ್ರಸರಣದ ಈ ಅಭಿಯಾನದಲ್ಲಿ ಕೈ ಜೋಡಿಸಬೇಕು ಎಂಬುದು ನಮ್ಮ ಅರಿಕೆ.

'ವಿವೇಕಪ್ರಭ' ಪತ್ರಿಕೆಯ ಮೂಲಕ ರಾಮಕೃಷ್ಣ–ವಿವೇಕಾನಂದರ ಸಮನ್ವಯ ವಾಣಿಯನ್ನು ಬಿತ್ತರಿಸುವಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಆಶ್ರಮಗಳಿಗೆ, ಸಂಸ್ಥೆಗಳಿಗೆ, ಸ್ವಯಂಸೇವಕರಿಗೆ, ಬಂಧುಮಿತ್ರರಿಗೆ, ಸಿಬ್ಬಂದಿ ವರ್ಗದವರಿಗೆ, ಜಾಹೀರಾತುದಾರರಿಗೆ, ಅಚ್ಚುಕಟ್ಟಾಗಿ ಮುದ್ರಿಸುತ್ತಿರುವ ಮುದ್ರಕರಿಗೆ, ಹಾಗೂ ಸಹಕಾರ ನೀಡುತ್ತಿರುವ ಸರಕಾರಿ ಇಲಾಖೆಗಳಿಗೆ, ಅಂಚೆ ಕಛೇರಿಯವರಿಗೆ ಪ್ರೀತಿಯ ಧನ್ಯವಾದಗಳು. ಈ ಪತ್ರಿಕೆಯನ್ನು ಎಲ್ಲರ ಬಳಿಗೆ ತಲುಪಿಸುವಲ್ಲಿ ತಮ್ಮೆಲ್ಲರ ಸಹಕಾರ ಎಂದೆಂದೂ ಇರಲಿ ಎಂದು ಆಶಿಸುತ್ತೇವೆ.

ಜೈ ಶ್ರೀರಾಮಕೃಷ್ಣ!

ಭಗವತ್ಸೇವೆಯಲ್ಲಿ ತಮ್ಮ

ಸ್ವಾಮಿ ಮುಕ್ತಿದಾನಂದ

ವ್ಯವಸ್ಥಾಪಕ ಸಂಪಾದಕರು